**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.686/2014**

**ಪಿ.ಡಬ್ಲ್ಯೂ: 10**
**ಸಿ.ಡಬ್ಲ್ಯೂ: 11**

ಸಾಕ್ಷಿದಾರರ **ಹೆಸರು** : ರವಿ
ತಂದೆಯ **ಹೆಸರು** : ಶಿವಲಿಂಗಯ್ಯ
**ವಯಸ್ಸು** : **35 ವರ್ಷ**
**ಉದ್ಯೋಗ** : ವ್ಯವಸಾಯ
**ವಾಸಸ್ಥಳ** : ಬಾವಿಕೆರೆ

**ದಿನಾಂಕ: 10-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಈಗ್ಗೆ ಸುಮಾರು **4, 5** ವರ್ಷಗಳ ಹಿಂದೆ ಮ: **12-30** ಗಂಟೆ ಸಮಯದಲ್ಲಿ ಬಾವಿಕೆರೆಯ ನಮ್ಮ ಮನೆಯ ಎದುರಿನ ಕೃಷಿ ಇಲಾಖೆಗೆ ಸೇರಿದ ಜಾಗಕ್ಕೆ ಗ್ರಾಮ ಲೆಕ್ಕಾಧಿಕಾರಿ ಜಗದೀಶ್ ಹಾಗೂ ಇತರೇ **6-7** ಜನರು ಬಂದು ಮಹಜರಿಗೆ ನನ್ನ ಸಹಿ ಪಡೆದುಕೊಂಡರು. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಉಳಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ. ನಿಪಿ-**4** ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸದರಿ ಸಾಕ್ಷಿ ಸಹಿಯನ್ನು ನಿಪಿ-**4(ಬಿ)** ಎಂದು ಗುರುತಿಸಲಾಯ್ತು. ಸದರಿ ಮಹಜರಿನಲ್ಲಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮಹಜರಿಗೆ ಅಬ್ದುಲ್ ಸತ್ತಾರ್ ರವರು ಸಹಿ ಮಾಡಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ.**

ದಿ: **15-03-2014** ರಂದು ಅರಸೀಕೆರೆ ಗ್ರಾಮದ ಸರ್ವೆ ನಂ: **7**/ಪಿ**2** ರಲ್ಲಿ ಕೃಷಿ ಇಲಾಖೆಗೆ ಸೇರಿದ ಜಾಗವನ್ನು **1** ನೇ ಆರೋಪಿಯ ಹೆಸರಿನಲ್ಲಿ **2** ನೇ ಆರೋಪಿ ಅಸೆಸ್ ಮೆಂಟಿನಲ್ಲಿ ಹೆಚ್ಚುವರಿಯಾಗಿ ಸೇರಿಸಿರುವ ಕುರಿತು ಪೋಲೀತರು ಮಹಜರ್ ಕ್ರಮ ಜರುಗಿಸಿ ಸಹಿ ಪಡೆದಿದ್ದಾರೆಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ಆದರೆ ಮಹಜರಿಗೆ ಸಹಿ ಮಾಡಿರುತ್ತೇನೆಂದು

ನುಡಿಯುತ್ತಾರೆ. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಪಾಟೀಸವಾಲು : 1*ನೇ *ಆರೋಪಿ ಪರ* ಶ್ರೀ ಎಸ್ ಪಿ *ವಕೀಲರಿಂದ.***

ನಿಪಿ-*4* ಮಹಜರಿನಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಂದೆ ಯಾವುದೇ ರೀತಿಯ ಬರವಣಿಗೆ ಮಾಡಿಲ್ಲ ಎಂದರೆ ಸರಿ. ಅಲ್ಲಿ ಇದ್ದ ಜನರು ಒತ್ತಾಯಕ್ಕೆ ನಾನು ಸಹಿ ಹಾಕಿರುತ್ತೇನೆಂದರೆ ಸರಿ.

*(2*ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಪ್ರಾರ್ಥಿಸಿರುತ್ತಾರೆ. ಆದ್ದರಿಂದ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲಾಯ್ತು*)*

***ಮರುವಿಚಾರಣೆ:*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***